ಅ) ಈ ಉದ್ಯಮಗಳ ಪುನರ್ ಜೀವನಕ್ಕೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳೇನು ?

ಇ) ಈ ಉದ್ಯಮಗಳಲ್ಲಿ ಎಷ್ಟು ಉದ್ಯಮಗಳನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆ ? ಅವುಗಳು ಯಾವುವು ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಸಣ್ಣ ಕೈಗಾರಿಕಾ ಉದ್ಯಮಕ್ಕೆ ಸಂಬಂಧಿಸಿದಂತೆ ರೋಗ ಗ್ರಸ್ಥ ಕೈಗಾರಿಕೆಗಳಿಗೆ ಸಂಬಂಧಪಟ್ಟ ವಿವರಗಳು ಕೆಳಕಂಡಂತಿವೆ :

ಭಾರತೀಯ ರಿಸರ್ವ್ ಬ್ಯಾಂಕ್ ವರದಿಯಂತೆ 5390 ಘಟಕಗಳು ರೋಗಗ್ರಸ್ಥವಾಗಿದೆಯೆಂದು ವರದಿ ಮಾಡಲಾಗಿದೆ. ಅವುಗಳಲ್ಲಿ 5073 ಘಟಕಗಳನ್ನು ಪುನಃ ಶ್ವೇತನಗೊಳಿಸಲು ಸಾಧ್ಯವಿರುವುದಿಲ್ಲ. 140 ಘಟಕಗಳು ಮಾತ್ರ ಪುನಃಶ್ವೇತನಕ್ಕೆ ಅರ್ಹವಿರುತ್ತವೆ. ಇವುಗಳಲ್ಲಿ 55 ಘಟಕಗಳನ್ನು ಪುನಃಶ್ವೇತನಗೊಳಿಸಲಾಗಿದೆ.

ಟೆಕ್ಸಾಕ್ ನಡೆಸಿದ ಮಾದರಿ ಸಮೀಕ್ಷೆ ವರದಿ ಪ್ರಕಾರ ರಾಜ್ಯದಲ್ಲಿ ಶೇ. 5.4 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ರೋಗಗ್ರಸ್ಥವಾಗಿದೆಯೆಂದು ತಿಳಿದುಬಂದಿದೆ.

ಆ) ಸಣ್ಣ ಕೈಗಾರಿಕಾ ಉದ್ಯಮಕ್ಕೆ ಸಂಬಂಧಿಸಿದಂತೆ ರೋಗ ಗ್ರಸ್ಥ ಕೈಗಾರಿಕೆಗಳಿಗೆ ಸಂಬಂಧಪಟ್ಟ ವಿವರಗಳು ಕೆಳಕಂಡಂತಿವೆ:

ರೋಗಗ್ರಸ್ಥ ಕೈಗಾರಿಕೆಗಳಿಗೆ ಯೋಜನಾ ವೆಚ್ಚದ ಶೇ. 25 ರಷ್ಟು ಗರಿಷ್ಠ 2.50 ಲಕ್ಷಗಳಿಗೆ ಮೀರದಂತೆ ಬಡ್ಡಿರಹಿತ ಬೀಜಧನ ಸಾಲ, ಮಾರಾಟ ತೆರಿಗೆ ಬಾಕಿಯನ್ನು ಪಾವತಿಸುವ ಬಗ್ಗೆ ಅವಧಿ ಮುಂದೂಡಿಕೆ, ವಿದ್ಯುತ್ ಶುಲ್ಕ ಪಾವತಿ ರಿಯಾಯಿತಿ, ಅಭಿವೃದ್ಧಿ ಸಾಲ ಬಾಕಿ ಪಾವತಿ ಬಗ್ಗೆ ಅವಧಿ ಮುಂದೂಡಿಕೆ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ.

ಇ) ಸಣ್ಣ ಕೈಗಾರಿಕೆಗಳು ಖಾಸಗಿ ವಲಯಗಳಲ್ಲಿರುತ್ತವೆ. ಸರ್ಕಾರಿ ಸ್ವಾಮ್ಯದಲ್ಲಿ ಬರುವುದಿಲ್ಲ. ಆದ್ದರಿಂದ ಇವುಗಳನ್ನು ಮುಚ್ಚಲು ಸರ್ಕಾರದ ನಿರ್ಧಾರದ ಅಗತ್ಯವಿರುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳ ಪುನರುಜ್ಜೀವನ ಕುರಿತು

4731 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೊಡಬೇಕಾದ ಸಬ್ಸಿಡಿ ಬಾಕಿ ಎಷ್ಟು ಹಾಗೂ ಆ ಸಂಸ್ಥೆಗಳು ಯಾವುವು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಎಷ್ಟು ವರ್ಷಗಳಿಂದ ಈ ಹಣವನ್ನು ಬಾಕಿ ಉಳಿಸಿಕೊಳ್ಳಲಾಗಿದೆ ?

ಇ) ಯಾವಾಗ ಈ ಹಣವನ್ನು ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್. ಆರ್. ಕಾಶ್ಯಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಜೂನ್ 2000ದ ಅಂತ್ಯದವರಿಗೆ ಸಹಾಯಧನ ಬಿಡುಗಡೆಯಾಗಬೇಕಾದ ಘಟಕದ ಸಂಖ್ಯೆ : 9004 ಒಟ್ಟು ಹಣ 23,841,60 ಲಕ್ಷಗಳು, ಜಿಲ್ಲಾವಾರು ವಿವರಣೆ ಲಗತ್ತಿಸಲಾಗಿದೆ.

ಆ) ಸಾಮಾನ್ಯವರ್ಗದವರಿಗೆ- ಜನವರಿ ಮತ್ತು ಫೆಬ್ರವರಿ99ರಲ್ಲಿ ಮಂಜೂರಾದ ಘಟಕಗಳಿಗೆ ಇನ್ನೂ ಶೇ. 50 ಸಹಾಯಧನವನ್ನು ಮತ್ತು ಮಾರ್ಚ್ 99 ನಂತರ ಮಂಜೂರಾದ ಘಟಕಗಳಿಗೆ ಪೂರ್ಣ ಸಹಾಯಧನ ಬಿಡುಗಡೆ ಮಾಡಬೇಕಾಗಿದೆ.

ವಿಶೇಷ ವರ್ಗದವರಿಗೆ : ಜನವರಿ 99 ರಿಂದ ಜೂನ್ 99 ರವರಿಗೆ ಇನ್ನೂ ಶೇ.50 ಸಹಾಯಧನವನ್ನು ಮತ್ತು ಜುಲೈ 99ರ ನಂತರ ಮಂಜೂರಾದ ಘಟಕಗಳಿಗೆ ಪೂರ್ಣ ಸಹಾಯಧನ ಬಿಡುಗಡೆ ಮಾಡಬೇಕಾಗಿದೆ.

ಇ) ಆಯವ್ಯಯದಲ್ಲಿ ಒದಗಿಸುವ ಅನುಧಾನವನ್ನಾಧರಿಸಿ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

DISRTRICT WISE INVESTMENT SUBSIDY PENDENCY AVAILABLE AS ON 30.6.2000

Sl. No.	Name of the District	Balance No.of units	Amount (Rs. in lacs)	Percentage Amt. Pendency
1	Dakshina Kannada	520	1352.23	5.67
2	Bellary	281	872.06	3.66
3	Mercara	81	267.70	1.12
4	Shimoga	196	467.13	1.96
5	Hassan	365	570.39	2.4
**6	Mandya	153	325.59	1.37
7	Raichur	134	443.12	1.86
**8	Dharwad	542	1252.91	5.26
**9	Bangalore(Urban)	776	4447.00	18.65
**10	Mysore	368	1254.58	5.26
**11	Tumkur	522	1262.85	5.3
**12	Chickmangalur	164	400.26	1.68

Sl. No.	Name of the District	Balance No.of units	Amount (Rs.in lacs)	Percentage Amt.Pendency
**13	Gulbarga	181	607.17	2.55
*14	Belgaum	751	1279.52	5.37
15	Chitradurga	230	452.95	1.9
**16	Kolar	693	2017.82	8.46
*17	Bijapur	263	519.14	2.18
**18	Bangalore (Rural)	967	2394.12	10.05
19	Bidar	303	357.35	1.5
20	Karwar	535	940.10	4
**21	Davanagere	105	331.86	1.4
22	Chamarajnagar	150	292.10	1.23
**23	Haveri	79.0	111.82	0.5
24	Gadag	144	151.39	0.64
**25	Koppal	83	399.25	1.68
26	Udupi	301	849.41	3.56
27	Bagalkot	117	221.34	0.93
	Total	**9004**	**23841.16**	

* As on 31.5.2000

** As on 31.3.2000

ವಿವಿಧ ಇಲಾಖೆಗಳಲ್ಲಿ ಮೀಸಲಾತಿ ಹಣ ನಿಗಧಿಪಡಿಸುವಿಕೆ

4733 - ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಶೇಕಡ 18 ಮೀಸಲಾತಿ ನಿಗದಿಪಡಿಸಲಾದ ಮೊತ್ತವೆಷ್ಟು? ಹಾಗೂ ಇದರಲ್ಲಿ ಖರ್ಚಾಗದೆ ಉಳಿದಿರುವ ಹಣ ಎಷ್ಟು? ಉಳಿದಿದ್ದಲ್ಲಿ ಇದಕ್ಕೆ ಕಾರಣವನ್ನು ತಾಲ್ಲೂಕುವಾರು ನೀಡುವುದು?*